**ದಿನಾಂಕ 06-11-2021 ರಂದು ಬೆಳ್ಳಗ್ಗೆ 10.30 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ವಾರ್ಡ್ ಸಂಖ್ಯೆ-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ: 06-11-2021 ರಂದು ಬೆಳ್ಳಗ್ಗೆ 10:30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ. ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ. ವಿಜಯಕುಮಾರ್ – ಸಹಾಯಕ ಕಾರ್ಯಪಾಲಕ ಅಭಿಯಂತರರು
3. ಶ್ರೀಮತಿ. ಶಿಲ್ಪಾಶ್ರೀ – ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
4. ಶ್ರೀ. ಬಾಬು ಕುಮಾರ್ – ಸದಸ್ಯರು
5. ಶ್ರೀ. ರವಿಚಂದ್ರ – ಸಹಾಯಕ ಅಭಿಯಂತರರು (ಯು.ಎಫ್.ಡಬ್ಲ್ಯೂ) ಬಿ.ಡಬ್ಲ್ಯೂ.ಎಸ್.ಎಸ್.ಬಿ
6. ಶ್ರೀ.ದೇವರಾಜ್ – ಅರಣ್ಯ ಇಲಾಖೆ
7. ಶ್ರೀ. ಗೋವಿಂದೇ ಗೌಡ – ತೋಟಗಾರಿಕೆ ಇಲಾಖೆ
8. ಶ್ರೀ. ಮಹದೇವ್ – ಕೆಲಸ ಪರಿವೀಕ್ಷಕ ಬಿ.ಡಬ್ಲ್ಯೂ.ಎಸ್.ಎಸ್. ಬಿ
9. ಶ್ರೀ. ಎಂ.ಫಂಜ ವಟನ್. – ಕೆಲಸ ಪರಿವೀಕ್ಷಕ ಬಿ.ಡಬ್ಲ್ಯೂ.ಎಸ್.ಎಸ್. ಬಿ

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರೂ ಆದ ಶ್ರೀಮತಿ. ಶ್ರೀಲಕ್ಷ್ಮೀ ರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- ಸಾರ್ವಜನಿಕರು ಮಾತನಾಡುತ್ತಾ, 17ನೇ 'ಸಿ' ಅಡ್ಡರಸ್ತೆ ಜೈನ್ ಕಾಲೇಜ್ ಹತ್ತಿರ ಡೆಬ್ರೀಸನ್ನು ತೆರವುಗೊಳಿಸಲು, ಚರಂಡಿಯಲ್ಲಿ ಹಾಗೂ ಕಲ್ವರ್ಟ್‌ಗಳಲ್ಲಿ ಹೂಳನ್ನು ತೆರವುಗೊಳಿಸಲು ಕೋರಿದ್ದು, ಇದಕ್ಕೆ ಸಂಬಂಧಪಟ್ಟ ಸಹಾಯಕ ಅಭಿಯಂತರರು ಕೂಡಲೇ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

- 10ನೇ ಮುಖ್ಯರಸ್ತೆ, 17ನೇ ಸಿ ಮುಖ್ಯರಸ್ತೆ, ಇಂದಿರಾನಗರ 2ನೇ ಹಂತದಲ್ಲಿ ವಿದ್ಯುತ್ ದೀಪಗಳು ಇರುವುದಿಲ್ಲ, ಇದರಿಂದ ರಾತ್ರಿ ವೇಳೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿದೆ ಎಂದು ದೂರಿರುತ್ತಾರೆ. ಈ ಸಂಬಂಧ ವಿದ್ಯುತ್ ಇಲಾಖೆಯವರು ಅಗತ್ಯ ಕ್ರಮ ಕೈಗೊಂಡು ಮುಂದಿನ ಸಭೆಗೆ ವರದಿ ಸಲ್ಲಿಸುವುದು.

➢ #2, 18ನೇ ಎ ಅಡ್ಡರಸ್ತೆಯಲ್ಲಿ ನೀರು ಸರಬರಾಜು ಸರಿಯಾಗಿ ಪೂರೈಕೆ ಆಗುತ್ತಿರುವುದಿಲ್ಲ ಎಂದು ಸಾರ್ವಜನಿಕರು ದೂರನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಬೆಂಗಳೂರು ಜಲ ಮಂಡಳಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಮುಂದಿನ ಸಭೆಗೆ ವರದಿ ಸಲ್ಲಿಸುವುದು.

➢ 9ನೇ ಅಡ್ಡರಸ್ತೆ ಸರ್ಕಲ್‌ನಲ್ಲಿ ಪಾದಚಾರಿ ಮಾರ್ಗ ಕುಸಿದಿದ್ದು, ಇದರಿಂದ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯುಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಸಾರ್ವಜನಿಕರು ದೂರನ್ನು ಸಲ್ಲಿಸಿರುತ್ತಾರೆ. ಕುಸಿದಿರುವ ಪಾದಚಾರಿ ರಸ್ತೆಯನ್ನು ಸರಿಪಡಿಸಲು ಸಹಾಯಕ ಅಭಿಯಂತರರು ಅಗತ್ಯ ಕ್ರಮ ಕೈಗೊಂಡು ಮುಂದಿನ ಸಭೆಗೆ ವರದಿ ಸಲ್ಲಿಸುವುದು.

➢ ಶ್ರೀ.ಆರ್.ಪಿ.ಶೆಟ್ಟಿ ಸಾರ್ವಜನಿಕರು ರವರು ಮಾತನಾಡುತ್ತಾ, ಇಂದಿರಾನಗರ 2ನೇ ಹಂತದಲ್ಲಿರುವ ಎ.ಬಿ.ಸಿ.ಡಿ ಪಾರ್ಕ್‌ನಲ್ಲಿ ವಿದ್ಯುತ್ ದೀಪಗಳು ಇರುವುದಿಲ್ಲ, ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸಿಕೊಡಲು ಕೋರಿರುತ್ತಾರೆ.

➢ ಶ್ರೀ.ಕುಮಾರ್, ಸದಸ್ಯರು ಮಾತನಾಡಿ, ಮರ್ಫಿಟೌನ್ ವ್ಯಾಪ್ತಿಯ ಎಲ್ಲಾ ರಸ್ತೆಗಳಲ್ಲಿನ ಡೆಬ್ರಿಸ್ & ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕ್ರಮವಹಿಸುವುದಾಗಿ ಸಹಾಯಕ ಅಭಿಯಂತರರು ಹಾಗೂ ಸಂಬಂಧಪಟ್ಟ ಘನತ್ಯಾಜ್ಯ ಅಧಿಕಾರಿಗಳು ತಿಳಿಸಿದರು.

➢ ಮರ್ಫಿಟೌನ್ ಮತ್ತು ಲಕ್ಷ್ಮೀಪುರದ ಕೆಲವು ರಸ್ತೆಯ ಪಕ್ಕದಲ್ಲಿ ಹಳೆಯದಾದ ವಾಹನಗಳನ್ನು ಅನಧಿಕೃತವಾಗಿ ನಿಲ್ಲಿಸಿರುತ್ತಾರೆ ಅವುಗಳನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಸಂಬಂಧಪಟ್ಟ ಪೊಲೀಸ್ ಇಲಾಖೆರವರಿಗೆ ಸೂಚಿಸಲು ಅಧ್ಯಕ್ಷರು ತಿಳಿಸಿದರು.

➢ ಲಕ್ಷ್ಮೀಪುರದ ಬಳಿ ಇರುವ ಬೃಹತ್ ಮಳೆನೀರುಗಾಲುವೆಗೆ ತಡೆಗೋಡೆಯನ್ನು ನಿರ್ಮಿಸಲು ಹರೀಶ್‌ರವರು ಕೋರಿದರು. ಇದಕ್ಕೆ ಸಂಬಂಧಪಟ್ಟ ಎಸ್‌ಡಬ್ಲ್ಯೂಡಿ ಇಲಾಖೆಯವರ ಗಮನಕ್ಕೆ ತಂದು ಅಗತ್ಯ ಕ್ರಮ ವಹಿಸಲಾಗುವುದೆಂದು ತಿಳಿಸಲಾಯಿತು.

ಮಳೆಗಾಲದ ಸಂದರ್ಭದಲ್ಲಿ ಮಳೆ ನೀರು ಸರಾಗವಾಗಿ ಹರಿಯಲು, ಮಳೆನೀರುಗಾಲುವೆಯಲ್ಲಿ ಹೂಳನ್ನು ತೆರವುಗೊಳಿಸಲು ಸಂಬಂಧಪಟ್ಟ ಮಳೆನೀರುಗಾಲುವೆ ವಿಭಾಗದ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.

6/11/2021

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ-80**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ 80**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 80**